**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,**
**ಪೊನ್ನಂಪೇಟೆ.**

**ಸಿ.ಸಿ. ನಂ. 1467/2023** **ಫ್ರಾ.ಸಾ –6**
**ಚಾ.ಸಾ – 13**

**ದಿನಾಂಕಃ 22.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಪ್ರಮೀಳಾ ವಿ ಆರ್ |
| ಗಂಡನ ಹೆಸರು | : | ಮಹೇಶ್ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಮಹಿಳಾ ಮುಖ್ಯ ಪೇದೆ |
| ವಾಸ ಸ್ಥಳ | : | ಹಾತೂರು |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

ನಾನು 2019 ರಿಂದ ಜೂನ್ 2025 ರ ತನಕ ಪೊನ್ನಂಪೇಟೆ ಪೊ.ಠಾಣೆಯಲ್ಲಿ ಮಹಿಳಾ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 02.10.2023 ರಂದು ನಾನು ಠಾಣಾ ಉಸ್ತುವರಿಯಲ್ಲಿದ್ದಾಗ ಸಂಜೆ 06.15 ಗಂಟೆಗೆ ಚಾಸಾ 12 ರವರು ಆರೋಪಿ ಮತ್ತು ಸ್ವತ್ತುಗಳೊಂದಿಗೆ ಠಾಣೆಗೆ ಹಾಜರಾಗಿ ನನ್ನ ಮುಂದೆ ಅವುಗಳನ್ನು ಹಾಜರುಪಡಿಸಿದ್ದು ನಾನು ಮಾಲುಪಟ್ಟಿಯಲ್ಲಿ ಆಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ಪಂಚರಾದ ಚಾಸಾ 4 ಮತ್ತು 5 ರವರ ಹಾಗೂ ಇತರ ಸಾಕ್ಷಿದಾರರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಆರೋಪಿಗೆ ನೋಟೀಸ್ ಜಾರಿಮಾಡಿ ಬಿಡುಗಡೆ ಮಾಡಿರುತ್ತೇನೆ. ದಿ. 10.10.2023 ರಂದು ಸ್ವತ್ತುಗಳನ್ನು RFSL Mysore ಗೆ ಕಳುಹಿಸಿಕೊಟ್ಟಿರುತ್ತೇನೆ. ದಿ. 13.10.2023 ರಂದು FSL ವರದಿ ಪಡೆದು ಕಡತಕ್ಕೆ ಆಳವಡಿಸಿಕೊಂಡಿರುತ್ತೇನೆ. ದಿ. 08.11.2023 ರಂದು ಪಿಡಿಓರವರಿಗೆ ಆರೋಪಿಯ

ವಾಸಸ್ಥಳ ದೃಡೀಕರಣ ಪತ್ರ ಕೋರಿ ಮನವಿ ಸಲ್ಲಿಸಿ ಅದೇ ದಿನ ವರದಿ ಪಡೆದುಕೊಂಡಿರುತ್ತೇನೆ.. ದಿ. 13.11.2023 ರಂದು ಅಂತಿಮ ದೋಷರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

ಸಾಕ್ಷಿಯು FSL ಮನವಿ ಮತ್ತು ವರದಿಯನ್ನು ಹಾಗೂ ಪಂಚಾಯಿತಿಯವರಿಗೆ ನೀಡಿದ ಮನವಿ ಮತ್ತು ಅವರು ನೀಡಿದ ವರದಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ ಪಿ 11 ರಿಂದ 14 ಎಂದು ಸಹಿಗಳನ್ನು ನಿ ಪಿ 11(ಎ) ರಿಂದ 14(ಎ) ಎಂದು ಗುರುತಿಸಲಾಯಿತು. ಆರೋಪಿಯನ್ನು ಮತ್ತು ನ್ಯಾಯಾಲಯದ ಮುಂದೆ ಇರುವ ಮು. ಮಾಗಳನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ. ಸಿ. ಪಿ ವಕೀಲರಿಂದಃ

90 M.L. ನ 103 Original Choice Indian Brandy ಮತ್ತು 90 M. L. ನ Original Choice Indian whisky ಹಾಗೂ 250/- ನಗದು ಮತ್ತು 2 ರೆಟ್ಟಿನ ಬಾಕ್ಸ್ ಗಳನ್ನು ತನಿಖೆಗೆ ಸ್ವೀಕೃತಿ ಮಾಡಿರುತ್ತೇನೆ. ರೆಟ್ಟಿನ ಬಾಕ್ಸ್ ನ ಗುರುತು ಹಿಡಿಯಲು ಅದರ ಮೇಲಿರುವ ಬರವಣಗೆ ಗೊತ್ತಿಲ್ಲ. ಮಹಜರ್ ಅನ್ನು ನಾನು ಓದಿಲ್ಲ. ಹಿಂದಿನ ತನಿಖಾಧಿಕಾರಿ ಸ್ಥಳದಲ್ಲಿ ಮಹಜರ್ ಮಾಡಿಲ್ಲ, ಆದ್ದರಿಂದ ನನಗೂ ಕೂಡ ಅದರ ಬಗ್ಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಮಹಜರ್ ಪಂಚ ಸಾಕ್ಷಿದಾರರಾದ ಚಾಸಾ 4 ಮತ್ತು 5 ರವರು ಸ್ಥಳದಲ್ಲಿ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಪಡೆದುಕೊಂಡ ಮದ್ಯ ಮಹಜರ್‌ನಲ್ಲಿ ಅವುಗಳನ್ನು ಗುರುತುಹಿಡಿಯಲು ವಿವರಗಳನ್ನು ಬರೆದಿಲ್ಲ ಎಂದರೆ ಗೊತ್ತಿಲ್ಲ. ಮದ್ಯವನ್ನು FSL ಗೆ ಕಳುಹಿಸಿಲ್ಲ ಎಂದರೆ ಸರಿಯಲ್ಲ. ನಾನು ಪಂಚಾಯಿತಿಯಿಂದ ಯಾವುದೇ ವಿವರ ಪೆಡದಿರುವುದಿಲ್ಲ ಮತ್ತ ತಿಳಿಸಿದ ಸ್ಥಳದಲ್ಲಿ ಆರೋಪಿಗೆ ಮನೆ ಇಲ್ಲ ಎಂದರೆ ಸರಿಯಲ್ಲ. ನಾನು

ಹಾಜರುಪಡಿಸಿರುವ ದಾಖಲೆಗಳಿಗೂ, ಆರೋಪಿಗೂ, ಈ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಕೇವಲ ಅಂಕಿ ಅಂಶಗಳಿಗೋಸ್ಕರ ಈ ಪ್ರಕರಣ ದಾಖಲಿಸಿಕೊಂಡು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷ್ಯದಾರಗಳಿಲ್ಲದರೂ ಆರೋಪಿಯ ವಿರುದ್ದ ಸುಳ್ಳು ದೋಷರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ